ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ನಮೂನೆ:2022-23 ದಿನಾಂಕ:22.09.2022

# ಕನ್ನಡ ಸಾಹಿತ್ಯ ಡಿಪ್ಲೊಮಾ ಕೋರ್ಸ್‌ನ ಗೃಹಲೇಖನ ಪ್ರಶ್ನೆಪತ್ರಿಕೆ 2020-21

*ವಿದ್ಯಾರ್ಥಿಗಳ ಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ. ಅದನ್ನು ಗಮನವಿಟ್ಟು ಓದಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಗೃಹಲೇಖನ/ಸಂಪ್ರಬಂಧಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿದೆ.*

ಗೃಹಲೇಖನ/ಸಂಪ್ರಬಂಧದ **ವಿಷಯಗಳು** (ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯಗಳ ಕುರಿತು ಕಡ್ಡಾಯವಾಗಿ ಗೃಹಲೇಖನ/ಸಂಪ್ರಬಂಧ ಸಿದ್ಧಪಡಿಸಿ 2 ಸೆಟ್‌ಗಳಲ್ಲಿ ಸಲ್ಲಿಸಬೇಕು.)

**ಕೋರ್ಸ್-16ಎ (ಪತ್ರಿಕೆ) - 1 : ಚಂಪೂ ಸಾಹಿತ್ಯ**

1. ಕನ್ನಡ ಚಂಪೂ ಕಾವ್ಯದಲ್ಲಿ ಎದ್ದು, ತೋರುವ ವೈಶಿಷ್ಟ್ಯಗಳಾವುವು? ವಿವರಿಸಿ.
2. ಅಮರಿಯಾದ ನಾಟ್ಯಾಂಗನೆ ಸಂಸ್ಕೃತಿ ನಾಟಕವನ್ನು ತೋರಿದ ಬಗೆ ಹೇಗೆ? ವಿವರಿಸಿ.
3. ರನ್ನ 'ಶಕ್ತಿಕವಿ' ಎಂಬ ಹೇಳಿಕೆಯನ್ನು ಗದಾಯುದ್ಧ ಕಾವ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.
4. ರಣರಂಗದಲ್ಲಿ ಮಡಿದ ವೀರರನ್ನು ಕೌರವನು ಕಂಡ ಬಗೆಯನ್ನು ವಿವರಿಸಿ.

**ಕೋರ್ಸ್-16ಬಿ (ಪತ್ರಿಕೆ) - 2 : ಭಕ್ತಿ ಸಾಹಿತ್ಯ**

1. ದೇವರ ದಾಸಿಮಯ್ಯನ ತಾತ್ವಿಕ ದೃಷ್ಟಿ ಅವನ ವಚನಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.
2. ಕನಕದಾಸರ ಕೀರ್ತನೆಗಳಲ್ಲಿ ಪುರಾಣ ಪ್ರಜ್ಞೆಯ ಮಹತ್ವವನ್ನು ವಿಶದಪಡಿಸಿ.
3. ತತ್ವಪದಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ರಾಜಕೀಯ ಪ್ರಜ್ಞೆಯ ಸ್ವರೂಪವನ್ನು ಚರ್ಚಿಸಿರಿ.
4. 'ಮಹಾದೇವಿಯಕ್ಕನ ಭಕ್ತಿಯ ತೀವ್ರತೆ ಮತ್ತು ವೈರಾಗ್ಯದ ಉತ್ಕಟತೆ ಆಕೆಯ ವಚನಗಳ ಮುಖ್ಯ ಲಕ್ಷಣವಾಗಿದೆ' ಎಂಬುದನ್ನು ಸಮಾಲೋಚಿಸಿ.

**ಕೋರ್ಸ್-16ಸಿ (ಪತ್ರಿಕೆ) - 3 : ಮಧ್ಯಕಾಲಿನ ಕನ್ನಡ ಸಾಹಿತ್ಯ**

1. ಕುಮಾರವಾಲ್ಮೀಕಿ, ಕನಕದಾಸ, ಚಾಟುವಿಠಲನಾಥರು ಷಟ್ಪದಿ ಸಾಹಿತ್ಯಕ್ಕೆ ಇತ್ತಿರುವ ಕೊಡುಗೆಗಳನ್ನು ವಿವರಿಸಿ.
2. 'ಹರಿಶ್ಚಂದ್ರ ಕಾವ್ಯ ಓರ್ವ ವ್ಯಕ್ತಿಯನ್ನು ಕೀರ್ತಿಸಿದ ಕಾವ್ಯವಾಗದೆ ಒಂದು ಮೌಲ್ಯವನ್ನು ಎತ್ತಿಹಿಡಿದ ಕಾವ್ಯವಾಯಿತು' ಈ ಹೇಳಿಕೆಯನ್ನು ಸಮರ್ಥಿಸಿ ಬರೆಯಿರಿ.
3. ಶಲ್ಯನನ್ನು ಸಾರಥಿಯಾಗಿ ಪಡೆದ ಕರ್ಣನ ಸಮರ ಸಿದ್ಧತೆಯ ಬಗೆಗೆ ಬರೆಯಿರಿ.
4. ಸರ್ವಜ್ಞನ ವಚನಗಳಲ್ಲಿ ನೀತಿಗೆ ಇರುವ ಪ್ರಾಶಸ್ತ್ಯವನ್ನು ಗಮನಿಸಿ. ಸರ್ವಜ್ಞನ ವಚನಗಳನ್ನು ನೀತಿ ಕಾವ್ಯದ ಸಾಲಿಗೆ ಸೇರಿಸಬಹುದೆ? ಸಮಾಲೋಚಿಸಿ ಬರೆಯಿರಿ.

**ಕೋರ್ಸ್-16ಡಿ (ಪತ್ರಿಕೆ) - 4 : ಸಾಹಿತ್ಯಾಧ್ಯಯನ ಸಾಮಾಗ್ರಿಗಳು**

1. ಕಾವ್ಯಮೀಮಾಂಸೆ ಎಂದರೇನು? ಭಾರತೀಯ ಕಾವ್ಯಮೀಮಾಂಸೆಯ ಪ್ರಾಚೀನತೆಯನ್ನು ತಿಳಿಸಿ.
2. ಅಲಂಕಾರ ವಿಚಾರವು ಒಂದು ಪ್ರಸ್ಥಾನವಾಗಿ ರೂಪುಗೊಂಡ ಬಗೆಯನ್ನೂ ಹಾಗೂ ಅಲಂಕಾರ ಪ್ರಸ್ಥಾನದ ಮಹತ್ವವನ್ನೂ ವಿಶದಪಡಿಸಿ.
3. ಷಟ್ಪದಿಯ ಮೂಲವನ್ನು ವಿವರಿಸಿ, ಕನ್ನಡ ಸಾಹಿತ್ಯದಲ್ಲಿ ಅದರ ವಿಕಾಸ ಹಂತಗಳನ್ನು ಪರಿಶೀಲಿಸಿ.
4. ಲಯ ಎಂದರೇನೆಂಬುದನ್ನು ವಿವರಿಸಿ, ಕನ್ನಡ ಕಾವ್ಯದಲ್ಲಿ ಅದರ ಸ್ವರೂಪ ಮತ್ತು ಮಹತ್ವವನ್ನು ವಿವರಿಸಿ.

**ಕೋರ್ಸ್-16ಇ(ಪತ್ರಿಕೆ) - 5 (ಅ) : ಸಂಪ್ರಬಂಧಗಳು**

**ಯಾವುದಾದರೂ ಒಂದು ವಿಷಯ ಕುರಿತು ಬರೆಯಿರಿ, ಕನಿಷ್ಠ 30 ಪುಟಗಳು (50 ಅಂಕಗಳಿಗೆ)**

1. ವಚನ ಸಾಹಿತ್ಯ : ಅರ್ಥ-ಸ್ವರೂಪ ಮತ್ತು ಸಾಮಾಜಿಕ ಆಶಯ
2. ದಾಸ ಸಾಹಿತ್ಯ ಭಕ್ತಿ ನಿರ್ವಚನ : ಪುರಂದರ, ಕನಕರ ಕೀರ್ತನೆಗಳ ಹಿನ್ನೆಲೆಯಲ್ಲಿ

**ಕೋರ್ಸ್16ಇ (ಪತ್ರಿಕೆ) - 5 (ಆ) : ಸಂಪ್ರಬಂಧಗಳು**

**ಯಾವುದಾದರೂ ಒಂದು ವಿಷಯ ಕುರಿತು ಬರೆಯಿರಿ, ಕನಿಷ್ಠ 30 ಪುಟಗಳು (50 ಅಂಕಗಳಿಗೆ)**

1. ಚಂದ್ರಶೇಖರ ಕಂಬಾರರ ಕಾವ್ಯ
2. ಕನ್ನಡ ಪರ ಚಳುವಳಿಗಳ ಉದ್ದೇಶ ಸ್ವರೂಪ

**ಅಥವಾ**

3. ಗ್ರಾಮೀಣ ಆಚರಣೆ-ಸಂಪ್ರದಾಯಗಳು

22/9/22

**ನಿರ್ದೇಶಕರು**
ದೂರಶಿಕ್ಷಣ ನಿರ್ದೇಶನಾಲಯ